


# ಗಿನ್ನಿಸ್ ದಾಖಲೆಯ ಲಂಬೂ!

**ಹೆಸರು** – ಸುಲ್ತಾನ್ ಕೋಸೆನ್.
**ವಯಸ್ಸು** – 26.
**ಊರು** – ಅಂಕರ, ಟರ್ಕಿ.

ಈತ ಜಗತ್ತಿನಲ್ಲೇ ಅತ್ಯಂತ ಎತ್ತರದ ವ್ಯಕ್ತಿ, ಜಗತ್ತಿನಲ್ಲೇ ಅತೀ ಅಗಲದ ಅಂಗೈ ಹೊಂದಿದಾತ ಮತ್ತು ಜಗತ್ತಿನಲ್ಲೇ ಅತ್ಯಂತ ಉದ್ದದ ಪಾದ ಇರುವಾತ.

ಟರ್ಕಿಯ ಈ ಸುಲ್ತಾನ್ ಕೋಸೆನ್ 2010ರ ಗಿನ್ನಿಸ್ ದಾಖಲೆಗೆ ಸಂಬಂಧಿಸಿದಂತೆ ಈ ಮೂರೂ ದಾಖಲೆಗಳನ್ನು ತನ್ನದಾಗಿಸಿಕೊಂಡಿರುವ ಲಂಬೂ! ಗಿನ್ನಿಸ್ ದಾಖಲೆ ಪುಸ್ತಕದ ಮುಖ್ಯ ಸಂಪಾದಕ ಕ್ರೇಗ್ ಗ್ಲೆಂಡೇ ಇದನ್ನು ಖಚಿತ ಪಡಿಸಿದ್ದಾರೆ.

ಸುಲ್ತಾನ್ ಕೋಸೆನ್‌ನ ಎತ್ತರ 8.1 ಅಡಿ! ಅಂದರೆ, 246.4 ಸೆಂ.ಮೀ. ಅಂಗೈಯ ಅಗಲ 10.8 ಅಂಗುಲ (27.5 ಸೆಂ.ಮೀ.), ಮತ್ತು ಪಾದದ ಉದ್ದ 14.4 ಅಂಗುಲ! (36.5 ಸೆಂ.ಮೀ.).

ಇಷ್ಟೊಂದೆತ್ತರ ಇರುವ ಈತನಿಗೆ ನಡೆದಾಡಲು ಎರಡು ಕೋಲುಗಳ ಸಹಾಯ ಬೇಕಂತೆ. ಬಾಲ್ಯದಲ್ಲಿ ನಾರ್ಮಲ್ ಆಗಿಯೇ ಬೆಳೆದ ಈತ 10ನೇ ವರ್ಷ ವಯಸ್ಸಿನ ಬಳಿಕ ವಿಪರೀತ ಎತ್ತರ ಬೆಳೆಯಲು ಶುರುವಿಟ್ಟುಕೊಂಡನಂತೆ. ಹೀಗೆ ಬೆಳೆಯುತ್ತಿದ್ದ ಸುಲ್ತಾನ್ ಕೋಸೆನ್‌ನ ಪಿಟ್ಯೂಟರಿ ಗ್ರಂಥಿಯಲ್ಲಿನ ಹಾರ್ಮೋನ್ ಅನ್ನು 2008ರಲ್ಲಿ ಕಿತ್ತೆಸೆದ ಮೇಲೆ ಎತ್ತರ ಬೆಳೆಯುವಿಕೆ ನಿಂತಿದೆ.

ಸೆಪ್ಟೆಂಬರ್ 16, 2009 ರಂದು ಸುಲ್ತಾನ್ ಕೋಸೆನ್ ವಿಶ್ವದ ಅತೀ ಎತ್ತರವಾದ ಮನುಷ್ಯ ಮತ್ತು ಅತೀ ಅಗಲ ಅಂಗೈ, ಅತೀ ಉದ್ದದ ಪಾದ ಹೊಂದಿರುವ ಕಾರಣ ಮೂರು ಗಿನ್ನಿಸ್ ದಾಖಲೆಯನ್ನು ಬಾಚಿಕೊಂಡಿದ್ದಾನೆ.

ಆದರೆ ಈತನ ಮೂವರು ಸಹೋದರರು ಮತ್ತು ಒಬ್ಬ ಸಹೋದರಿ ಸಾಮಾನ್ಯ ಮನುಷ್ಯರ ಎತ್ತರವನ್ನೇ ಹೊಂದಿದ್ದಾರೆ.

ಅಂದ ಹಾಗೆ, ಈತನ ನಾಪಿತ ಪ್ರತಿ ಸಲ ಹೇರ್ ಕಟಿಂಗ್ ಮಾಡುವಾಗಲೂ ಎತ್ತರದ ಸ್ಟೂಲ್ ಮೇಲೆ ನಿಂತೇ ಮಾಡುತ್ತಿದ್ದಾನಂತೆ!

■ ಮಾವ

ವಿನ್ಯಾಸ: ದೇವಿ